ನಿಜ. ಆದರೂ ಅವುಗಳಿಂದ ಹಾಡಿಗೆ ಉಂಟಾಗುವ ತೊಂದರೆ ಮನಸ್ಸಿಗರ್ಥವಾಗಿದ್ದರೆ, ಕವಿಯು ಬರೆಯುವಾಗ ಭಾಷೆಯನ್ನು ಎಷ್ಟೋ ಹದ್ದಿನಲ್ಲಿಟ್ಟುಕೊಳ್ಳಬಲ್ಲವನಾಗುತ್ತಾನೆ.

ಪ್ರಾಚೀನ ಗೀತಕವಿಗಳೆಲ್ಲರೂ ಈ ತತ್ತ್ವವನ್ನು ಬಹಳಮಟ್ಟಿಗೆ ಮನಗಂಡು ಬಳಸಿಕೊಂಡವರೇ. ಸಂಗೀತ ರತ್ನಾಕರದ ರಾಗಾಧ್ಯಾಯದಲ್ಲಿ 'ಭಿನ್ನತಾನ' ರಾಗಕ್ಕೆ ಉದಾಹರಣವಾಗಿ ಶಾರ್ಙ್ಗದೇವನು ಕೊಟ್ಟಿರುವ ಈ ಪ್ರಾಚೀನ ಪದವನ್ನು ನೋಡಿ:

'ಹರವರ ಮುಕುಟ ಜಟಾಲಲಿತಂ–ಅಮರವಧೂಕುಚಪರಿಮಲಿತಂ
ಬಹುವಿಧಕುಸುಮರಜೋರುಣಿತಂ–ವಿಜಯತೇ ಗಂಗಾ ವಿಮಲಜಲಂ' ||

ವ್ಯಂಜನಗಳ ವಿವಿಧತೆಗೂ ವಿಚಿತ್ರ ಸಂಯೋಗಗಳಿಗೂ ಸಂಸ್ಕೃತ ಭಾಷೆಯಲ್ಲಿದ್ದಷ್ಟು ಪ್ರಾಶಸ್ತ್ಯವೂ ಸ್ವಚ್ಛಂದಾಧಿಕಾರವೂ ನಮ್ಮ ದೇಶದಲ್ಲಿನ ಮತ್ತಾವ ಭಾಷೆಯಲ್ಲೂ ಇಲ್ಲ. ಮಿಕ್ಕ ಭಾಷೆಗಳ ಬೆಳವಣಿಗೆಯ ಚರಿತ್ರೆಯೆಲ್ಲಾ ಆ ವ್ಯಂಜನಗಳ ವೇಧೆಯನ್ನು ಕಡಮೆ ಮಾಡುವ ಪ್ರಯತ್ನವಾಗಿಯೇ ಕಾಣಬರುತ್ತೆ. 'ಸಂಸ್ಕೃತ ಭಾಷೆಯ ಬಂಧವೇ ಪುರುಷವಾದದ್ದು' ಎಂದಿದ್ದಾನೆ ಒಬ್ಬ ಪ್ರಾಕೃತ ಭಾಷಾಕವಿ! ಅದನ್ನು ನಾದವ್ಯಕ್ತಿಗೆ ಸಹಾಯವಾಗಿ ಹವಣಿಸುವುದೆಂದರೆ ದೊಡ್ಡ ಸಾಹಸ ಮಾತ್ರವಲ್ಲ; ತ್ಯಾಗವೂ ಹೌದು: ಅದಕ್ಕಾಗಿ ಎಷ್ಟೋ ಅರ್ಥಭಾವಗಳನ್ನು ಬಿಟ್ಟುಬಿಡಬೇಕಾಗುವುದು. ಇಂಥ ಕೈವಾಡಗಾರರಲ್ಲಿ ಜಯದೇವ ಮಹಾಕವಿ ಅಗ್ರಗಣ್ಯನಾಗಿ ತೋರುತ್ತಾನೆ. ಆತನ 'ಗೀತಗೋವಿಂದ' ಪದಗಳೂ ಪದ್ಯಗಳೂ ಮೇಳೈಸಿದ ಅದ್ಭುತ ರಚನೆ. ಅದರಲ್ಲಿ ಹಾಡುಗಳೇ ಮುಖ್ಯವಾದವು. ಪದ್ಯಗಳು ಓದುವುದಕ್ಕೆ; ಪದಗಳು ಹಾಡುವುದಕ್ಕೆ. ಆದ್ದರಿಂದ ಭಾಷಾವಿಷಯವಾದ ಜಯದೇವನ ನೋಟ ಆ ಎರಡರಲ್ಲೂ ಬೇರೆ ಬೇರೆಯಾಗಿ ಕಾಣುವುದು. ತನ್ನ 'ಸರಸ್ವತಿ', 'ಮಧುರ ಕೋಮಲ ಕಾಂತ ಪದಾವಳಿ' ಉಳ್ಳದ್ದೆಂದು ಆತನೇ ಹೇಳಿದ್ದಾನೆ. ಆದರೆ ಆ ಮಾಧುರ್ಯಾದಿ ಧರ್ಮಗಳು ಪದ್ಯಗಳಿಗಿಂತ ಪದಗಳಲ್ಲೇ ಹೆಚ್ಚು ವ್ಯಕ್ತವಾಗಿದೆ. ಮಾದರಿಗೆ ಆತನ ಪದ್ಯವೊಂದು:

ರಾಸೋಲ್ಲಾಸಭರೇಣ ವಿಭ್ರಮಭೃತಾಂ ಆಭೀರವಾಮಭ್ರುವಾಂ
ಅಭ್ಯರ್ಣೇ ಪರಿರಭ್ಯ ನಿರ್ಭರಮುರಃ ಪ್ರೇಮಾಂಧಯಾ ರಾಧಯಾ,
ಸಾಧು ತ್ವದ್ವದನಂ ಸುಧಾಮಯಮಿತಿ ವ್ಯಾಹೃತ್ಯ ಗೀತಸ್ತುತಿ
ವ್ಯಾಜಾದುದ್ಭಟಚ್ಯುಮ್ಬಿತಃ ಸ್ಮಿತಮನೋಹಾರೀ ಹರಿಃ ಪಾತು ವಃ ||

ಗೀತಗೋವಿಂದವನ್ನು ಅನುಕರಿಸಿದವರು ಹಲವರಿದ್ದಾರೆ. ಆದರೆ ಅವರಲ್ಲಿ ಯಾರಿಗೂ ಭಾಷೆಯನ್ನು ಹೀಗೆ ಬಾಗಿಸುವ ಶಕ್ತಿಯಿಲ್ಲ.

ಹೀಗೆಯೇ ಅಕಾರಾದಿ ಸ್ವರಗಳೂ ಕೂಡ ಹಾಡಿಕೆಯ ಅಕ್ಕರೆಗೆ ತಕ್ಕಂತೆ ತಗ್ಗಿ ನಡೆಯಬೇಕಾಗಿದೆ. ಅವು ಸ್ವತೋರಮ್ಯವಾದವೆಂದು ಹೇಳಿದೆ. ಆದರೆ ಭಾಷೆಯಲ್ಲಿ ಅವುಗಳಿಗೆ ಕಾಲನಿಯಮವುಂಟು; ಲಘುವಿಗೆ ಒಂದು ಮಾತ್ರೆಯ ಕಾಲ; ಗುರುವಿಗೆ ಎರಡು; ಪ್ಲುತಕ್ಕೆ ಮೂರು; ಇಷ್ಟರ ಮೇಲ್ಪಟ್ಟು ಸ್ವರಗಳನ್ನು ಭಾಷೆಯಲ್ಲಿ ಎಳೆಯಬೇಕಾಗಿಲ್ಲ. ಆದರೆ ಸಂಗೀತಕ್ಕಷ್ಟು ಸಾಲದು. ಜಯದೇವಾದಿ ಪ್ರಾಚೀನರ ರಚನೆಗಳಲ್ಲಿ ಬಹಳ ಮಟ್ಟಿಗೆ ಈ ನಿಯಮವನ್ನು ಮೀರದೆಯೇ ಹಾಡಿನ ಕಟ್ಟಳೆ ನಡೆದಿದೆ. ಆದ್ದರಿಂದಲೇ ಅವುಗಳಲ್ಲಿ ನಾದಾಭಿವ್ಯಕ್ತಿಗೂ ವಿಸ್ತಾರಕ್ಕೂ ಅವಕಾಶ ಸಾಲದೆನ್ನಿಸುವುದು. ಆದ್ದರಿಂದ ಹಾಡುಗಳಲ್ಲಿ ಲಘುವಿಗೆ ಒಂದಕ್ಕಿಂತ ಗುರುವಿಗೆ ಎರಡಕ್ಕಿಂತ ಹೆಚ್ಚು ಮಾತ್ರೆಗಳ ಕಾಲವನ್ನು ಕೊಟ್ಟು ಸ್ವೇಚ್ಛೆಯಾಗಿ ರಚನೆ ಮಾಡಿದ್ದಾರೆ ಈಚಿನವರು. ಇದೇ ಸ್ವರಗಳ ರಮ್ಯತೆ. ಈ ತರದ ವಾಗ್ಗೇಯಕಾರರ ಪದ್ಧತಿಯೇ ಈಗಲೂ ಆಚರಣೆಯಲ್ಲಿದೆ.

ಸಂಗೀತ ಸಾಹಿತ್ಯಗಳ ಪರಸ್ಪರ ಸ್ಪರ್ಧೆಯಲ್ಲಿ ಸಂಗೀತದ ಕೈ ಮೇಲಾದಾಗ ಆಗುವ ಸಹಜ ಪರಿಣಾಮಗಳಲ್ಲಿ ಈ ಅಕ್ಷರರಮ್ಯತೆ ಒಂದು, ಅಷ್ಟೇ ಹೊರತು ನಿಯಮವಲ್ಲ. ನಿರ್ಮಾಣೋತ್ಸಾಹವು ಸಂಗೀತದ ಕಡೆ ಹೆಚ್ಚಾಗಿದ್ದರೆ ಸಾಹಿತ್ಯ ತನ್ನಷ್ಟಕ್ಕೆ ಈ ರಮ್ಯಾವಸ್ಥೆಗೆ ಇಳಿಯುವುದು. ಹಾಗಲ್ಲದೆ ಭಕ್ತಿ–ಶೃಂಗಾರ ಮುಂತಾದ ರಸಭಾವಗಳ ಉದ್ರೇಕವು ಹೆಚ್ಚಿದಾಗ ಸಾಹಿತ್ಯವು ಕೊಟ್ಟ ಅಕ್ಷರಗಳು ಎಂಥವಾದರೂ ಅವುಗಳಿಂದಲೇ ಸಂಗೀತ ಸವರಣೆ ಮಾಡಿಕೊಳ್ಳಬೇಕಾಗುವುದು. ಮಹಾಮಹರೆಲ್ಲರ ರಚನೆಗಳಲ್ಲೂ ನಾವಿದನ್ನು ಕಾಣಬಹುದು.

ರಾಳಪಳ್ಳಿ ಅನಂತ ಕೃಷ್ಣಶರ್ಮಾ, ಅವರ 'ಗಾನಕಲೆ' ಕೃತಿಯ ಪ್ರಬಂಧ